**ಪಿ. ಡಬ್ಲ್ಯೂ: 1**

**( ಇಂದು ದಿಃ 26/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಖ್ಯ ವಿಚಾರಣೆ : ಪಿರ್ಯಾದಿ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಮತ್ತು ಈ ಕೆಳಕಂಡ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿಪಿ–1 ಎಂದು ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ–1(ಎ) ಎಂದು, ಬ್ಯಾಂಕ್ ಹಿಂಬರಹವನ್ನು ನಿಪಿ–2 ಎಂದು, ಆರೋಪಿಗೆ ನೀಡಿರುವ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–3 ಎಂದು, ಅಂಚೆ ರಶೀದಿ ನಿಪಿ–4 ಎಂದು, ಆರೋಪಿಗೆ ಕಳುಹಿಸಿದ ನೋಟೀಸು ಆರೋಪಿ ಸ್ವೀಕರಿಸದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ನಿಪಿ–5 ಎಂದು, ಸದ್ರಿ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಅದರಲ್ಲಿ ಇರುವ ನೋಟೀಸಿನ ಪ್ರತಿಯನ್ನು ನಿಪಿ–5 ಎ ಎಂದು, ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–6 ಎಂದು, ಆರೋಪಿಯ ಸಾಲದ ಅರ್ಜಿಯ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–7 ಎಂದು, ಆರೋಪಿಯ ಸಾಲದ ಕರಾರು ಪತ್ರದ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–8 ಎಂದು, ಡಿಮಾಂಡ್ ಪ್ರಾಮೀಸರಿ ನೋಟೀನ ಯಥಾ ಪ್ರತಿಯನ್ನು ನಿಪಿ–9 ಎಂದು, ಬ್ಯಾಂಕ್ ರಶೀದಿಯ ಯಥಾ ಪ್ರತಿಯನ್ನು ನಿಪಿ–10 ಎಂದು, ಬ್ಯಾಂಕ್ ಸ್ಟೇಟ್ ಮೆಂಟಿನ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–11 ಎಂದು ಗುರುತಿಸಲಾಯಿತು.

ಆದ್ದರಿಂದ ದೂರಿನಲ್ಲಿ ಕೇಳಿದಂತೆ ಆದೇಶವಾಗಬೇಕೆಂದು ಕೋರುತ್ತೇನೆ .

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**